ಶ್ರೀ ಎ. ಶಂಕರ ಆಳ್ವ.—ಎಸ್ಟಿಮೇಟ್ ಮಾಡುವಾಗ ಪರ್ಸಂಟೇಜ್ ಜಾಸ್ತಿ ಫಿಕ್ಸ್ ಮಾಡುತ್ತೇವೆ. ಕೆಲವು ಕಡೆ ಒಂದೆರಡು ವರ್ಷಗಳಲ್ಲಿ ಎಲೆಕ್ಷನ್ ಇರಲಿಲ್ಲ. ಎರೆಕ್ಷನ್‌ಗೆ ಖರ್ಚು ಮಾಡಬೇಕು ಎಂದು ಲೆಕ್ಕಕ್ಕೆ ಹಿಡಿದಿದ್ದಾರೆ. ಕೆಲವರನ್ನು ಗಾರ್ನಮೆಂಟ್ ಸರ್ವೆಂಟ್ ಎಂದು ಪರಿಗಣಿಸಬೇಕು, ಸರ್ಕಾರಿ ನಂಬಳ ಕೊಡಬೇಕು ಆದನ್ನು ಮಾರ್ಕೆಟಿಂಗ್ ಕಮಿಟಿಯಿಂದ ತೆಗೆದುಕೊಳ್ಳಬೇಕಾಗುತ್ತದೆ. ಎಸ್ಟಿಮೇಟ್ ಮಾಡುವಾಗ ಇಷ್ಟೇ ಖರ್ಚಾಗುತ್ತದೆ ಎಂದು ಗೊತ್ತಾಗುವುದಿಲ್ಲ. ಜಾಸ್ತಿ ಎಸ್ಟಿಮೇಟ್ ಮಾಡಿ ತೆಗೆದುಕೊಂಡಿದ್ದಾರೆ ಅದನ್ನು ಕಡಿಮೆ ಮಾಡುತ್ತಾ ಬರುತ್ತಾರೆ. ಜಾಸ್ತಿ ಇದ್ದದನ್ನು ಪ್ರತಿಯೊಂದು ಕಡೆ ಕಮಿಟಿಗೆ ರೀ ಫಂಡ್ ಮಾಡುತ್ತಾರೆ.

Communication facilities in some villages of Coondapur Taluk

806. **Sri A. G. KODGI** (Baindur).—

Will the Minister for Public Works and Electricity be pleased to state:—

(*a*) the number of villages in Coondapur Taluk (South Kanara) which have no access to roads during the monsoon ;

(*b*) whether there are any proposals before the Government to provide communication facilities to those villages ;

(*c*) the number of bridges that are needed on the above roads and the estimated costs of the same ?

Sri H. M. CHANNABASAPPA (Minister for Public Works and Electricity).—

(*a*) 25 villages.

(*b*) Yes. For twelve villages.

(*c*) 26 bridges at an approximat cost of Rs. 75.00 lakhs.

ಶ್ರೀ ಎ. ಜಿ. ಕೊಡಗಿ.—ತಾವು ಉತ್ತರದಲ್ಲಿ ಹೇಳಿದ್ದೀರಿ ಕುಂದಾಪುರ ತಾಲ್ಲೂಕಿನ 25ಗ್ರಾಮಗಳಿಗೆ ಮಾನ್‌ಸೂನ್ ಕಾಲದಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆಯಿಲ್ಲ ಎಂದು. ಸ್ವಾತಂತ್ರ್ಯ ಬಂದು ಕಳೆದ 25 ವರ್ಷಗಳಾದರೂ 25 ಊರುಗಳಿಗೆ ಸಾರಿಗೆ ಸಂಪರ್ಕ ವ್ಯವಸ್ಥೆ ಇಲ್ಲ ಎಂದರೆ ಬಹಳ ಅತ್ಯಪೇಕ್ಷಿತವಾಗಿ ಕಾಣುತ್ತದೆ. ಈ ದಿಶೆಯಲ್ಲಿ ಸಂಪರ್ಕ ವ್ಯವಸ್ಥೆಯನ್ನು ಸರಿಯಾಗಿ ಒದಗಿಸುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಎಚ್.ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಈಗಾಗಲೇ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎ. ಜಿ. ಕೊಡಗಿ.—ಸಾರಿಗೆ ಸಂಪರ್ಕಗಳನ್ನು ಒದಗಿಸಿಕೊಡಬೇಕಾದರೆ ರೂರಲ್ ಕಮ್ಯುನಿಕೇಷನ್ ಪ್ರೋಗ್ರಾಮ್ ಪ್ರಕಾರ ರಸ್ತೆಗಳನ್ನು ಮುಂಜೂರಾತಿ ಮಾಡುವುದಕ್ಕೆ ಸೋದಾಗ ಈ ವಿಷಯಗಳನ್ನು ತೆಗೆದುಕೊಳ್ಳುತ್ತೀರೆಂದು ನನ್ನ ಭಾವನೆ. ಆದರೆ ಮಲೆನಾಡು ಪ್ರದೇಶದಲ್ಲಿ ಸೇತುವೆಗಳು ಅವಶ್ಯಕವಿರುವುದರಿಂದ ಸಾರಿಗೆ ಸಂಪರ್ಕ ಸಂಪೂರ್ಣವಾಗಿ ಆಗಬೇಕಾದರೆ ಸೇತುವೆಗಳು ರಚನೆಯಾಗಬೇಕು. 76 ಸೇತುವೆಗಳು ರಚನೆಯಾಗಬೇಕು. 75 ಲಕ್ಷ ರೂಪಾಯಿ ವೆಚ್ಚಮಾಡಿ ವರ್ಷ ಒಂದಕ್ಕೆ ನಾಲ್ಕಾರು ಸೇತುವೆಗಳನ್ನು ತೆಗೆದುಕೊಂಡು ನಾಲ್ಕು ವರ್ಷಗಳಲ್ಲಿ ಎರಡ್ಮೂ ಗ್ರಾಮಗಳಿಗೂ ಸಾರಿಗೆ ಸಂಪರ್ಕ ಒದಗಿಸುವ ಯೋಜನೆ ಹಾಕಿದ್ದೀರಾ ? ನಿರ್ದಿಷ್ಟವಾದ ಗುರಿ ಇಟ್ಟುಕೊಂಡಿದ್ದೀರಾ ? ಈ ಕೆಲಸಮಾಡುವುದಕ್ಕೆ ಭರವಸೆ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಭೆಯಲ್ಲಿ ಈಗಾಗಲೇ ಘೋಷಣೆ ಮಾಡಿದ್ದೇನೆ. ದೊಡ್ಡ ದೊಡ್ಡ ಸೇತುವೆಗಳು ಎಲ್ಲೆಲ್ಲಿ ನಮ್ಮ ರಾಜ್ಯದಲ್ಲಿ ಇವೆ. ಅವು ಎಲ್ಲವನ್ನೂ ಕೂಡ ತೆಗೆದು ಕೊಳ್ಳಲಿಕ್ಕೆ

ಕಾರ್ಪೊರೇಷನ್ ಮುಖಾಂತರ ತೆಗೆದುಕೊಂಡು 5-6 ಅಥವಾ ನಿರ್ದಿಷ್ಟವಾಗಿ ಇಷ್ಟು ಸೇತುವೆಗಳನ್ನು ಪೂರೈಸಬೇಕೆಂದು ಸರ್ಕಾರದ ಇಚ್ಛೆ ಇದೆ. ಸಭೆಯಲ್ಲಿ ಮಾನ್ಯ ಸದಸ್ಯರಿಗೆ ಹೋದ ಸೆಷನ್‌ನಲ್ಲಿ ತಿಳಿಸಿದ್ದೇನೆ. ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಚಿಕ್ಕ ಚಿಕ್ಕ ಸೇತುವೆಗಳ ಬಗ್ಗೆ ಅದರೂ ಸಾಕಷ್ಟು ಹೆಚ್ಚಿಗೆ ಗಮನಕೊಡದಿದ್ದರೆ ಮಲೆನಾಡಿನಲ್ಲಿ ಇರುವ ಹಳ್ಳಿಗಳಲ್ಲಿ ಹೆಚ್ಚಿಗೆ ಬೆಳೆ ಬೆಳೆಯುವುದಕ್ಕೆ ಮತ್ತು ಸರ್ಕಾರ ಹೆಚ್ಚಿಗೆ ಆಹಾರಧಾನ್ಯ ಒದಗಿಸುವುದಕ್ಕೆ ಆಗುವುದಿಲ್ಲ. ಆ ಬಗ್ಗೆ ಸಾಕಷ್ಟು ಹಣ ಒದಗಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂಟಿಗ್ರೇಟೆಡ್ ಪ್ರೋಗ್ರಾಮ್ ಮತ್ತು ರೂರಲ್ ಪ್ರೋಗ್ರಾಮ್ ಹೊರಡಿಸಿ ಇಂಟಿಗ್ರೇಟೆಡ್ ಪ್ರೋಗ್ರಾಂಗಾಗಿ ಮಾಸ್ಟರ್ ಪ್ಲಾನ್ ಮಾಡಬೇಕು ಎಂದು ತಮಗೆ ಈಗಾಗಲೇ ನನ್ನ ವಿವರ ಪತ್ರ ಬರೆದಿದ್ದೇನೆ. ನಿಮ್ಮ ಮಾಹಿತಿಗಳು ಬಂದಮೇಲೆ ದೇಶವಲ್ಲಿ ಇಡೀ ರಾಜ್ಯಕ್ಕೆ ಅನುಕೂಲ ಆಗುವ ಹಾಗೆ ಮಾಸ್ಟರ್ ಪ್ಲಾನ್ ತಯಾರುಮಾಡಿ ರಸ್ತೆಗಳು, ಸಿ.ಡಿ. ವರ್ಕ್ಸ್ ಆಗಬೇಕು ಎಂದು ಸರ್ಕಾರ ನಿರ್ಧಾರ ತೆಗೆದುಕೊಂಡಿದೆ.

Immovable properties belonging to Thirupathi Sri Amaragiri Venkataramanaswamy

365. Sri H. S. SIDDAPPA (Arsikere).—

Will the Minister for Revenue be pleased to state :—

(*a*) the immovable properties held in the name of Thirupathi Sri Amargiri Venkataramanaswamy in Arasikere Taluk, Kasaba Hobli ;

(*b*) the properties leased out to private parties, the purpose and conditions of lease ;

(*c*) whether the lessee fulfilled the lease conditions ; if not, why not ; the action proposed for fulfilment of the lease conditions ?

Sri N. HUTCHAMASTHY GOWDA (Minister for Revenue).—

(*a*) An extent of 109 Acres 18 guntas of land, one site and a house are endowed in the name of the deity.

(*b*) The lands have been leased out to the private partties subject to the payment of Gutta amount fixed on them.

(*c*) The lessees have fuffilled the lease conditions. So the question of taking action does not arise.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಸ್ವಾಮಿ. ತಾವು ಈ ಪ್ರಶ್ನೆಗೆ ಉತ್ತರವಾಗಿ ಈ ದೇವಸ್ಥಾನಕ್ಕೆ ಸೇರಿದ ಹಾಗೆ ಒಂದು ಸೈಟು ಮತ್ತು ಒಂದು ಮನೆ ಇದೆ ಎಂದು ಹೇಳಿದ್ದಿರಿ ಈಗ ಆ ಸೈಟು ಮನೆ ಎಲ್ಲಿದೆ ಎನ್ನುವುದನ್ನು ಹೇಳುತ್ತೀರಾ ?

†ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸೈಟನ್ನು ಸಿನಿಮಾ ಥಿಯೇಟರನ್ನು ಕಟ್ಟುವುದಕ್ಕೋಸ್ಕರ ಶ್ರೀ ಎಂ. ಆರ್. ಪುಟ್ಟಸ್ವಾಮಯ್ಯ ಅನ್ನುವವರಿಗೆ ಕೆಲವು ಷರತ್ತುಗಳನ್ನು ಹಾಕಿ ಕೊಟ್ಟಿದೆ. ಮೊದಲು 30 ವರ್ಷದ ಷರತ್ತು ಹಾಕಿತ್ತು. ಅದಾದಮೇಲೆ ಮತ್ತೆ ವಾಯಿದೆ ಹೆಚ್ಚು ಮಾಡಿದೆ. ಮತ್ತು ಅದರಲ್ಲಿ ಆ ಸೈಟನ್ನು ಸ್ವಾಧೀನಕ್ಕೆ ಕೊಟ್ಟ ಮೇಲೆ ಅವರಿಗೆ ತಿಂಗಳು ಒಂದಕ್ಕೆ 60 ರೂಪಾಯಿ ಗ್ರೌಂಡ್ ರೆಂಟ್ ಕೊಡಬೇಕು ಎನ್ನುವ ಷರತ್ತು ಹಾಕಿದೆ. ಇನ್ನೂ ಕೆಲವಾರು ಷರತ್ತುಗಳನ್ನು ಹಾಕಿದೆ.